ಕುಂದಾಳ ದಿನಚರಿ ಕ್ರಮಬದ್ಧವಾಗಿ ಪ್ರಾರಂಭವಾಗುತ್ತದೆ. ಬೆಳಗ್ಗೆ ಆರಕ್ಕೆ ಅಲಾರಾಂ ಸದ್ದು ಮಾಡುತ್ತದೆ. ಸ್ವಲ್ಪ ಹೊತ್ತು ಅಲಾರಾಂ ಕೇಳಿಸಿಕೊಂಡು ಆಮೇಲೆ ಕುಂದಾ ಅದನ್ನು ನಿಲ್ಲಿಸುತ್ತಾಳೆ. ಆಲಸ್ಯ ಬಿಟ್ಟು ಏಳುತ್ತಾಳೆ. ಹೊದಿಕೆಯನ್ನು ಮಡಚಿ ದಿಂಬಿನ ಕೆಳಗೆ ಇಡುತ್ತಾಳೆ. ಹಾಸಿಗೆಯ ಮೇಲೆ ಕೈಯಾಡಿಸಿ ಚಾದರ ಸರಿಪಡಿಸುತ್ತಾಳೆ. ಗ್ಯಾಸ್ ಮೇಲೆ ಚಹಾ ಪಾತ್ರೆ ಇಡುತ್ತಾಳೆ. ಒಬ್ಬರಿಗಾಗುವಷ್ಟು ಚಹಾ. ಬೇರೆ ಯಾರೂ ಇಲ್ಲ. ಫ್ರಿಡ್ಜ್‌ನಲ್ಲಿರುವ ಹಾಲಿನ ಪ್ಯಾಕೆಟ್ ಹೊರಗೆ ತೆಗೆದು ಹಾಲನ್ನು ಪಾತ್ರೆಗೆ ಸುರಿಯುತ್ತಾಳೆ. ಆಮೇಲೆ ಆ ಪಾತ್ರೆಯನ್ನು ಗ್ಯಾಸ್ ಮೇಲೆ ಇಟ್ಟು ಮುಖ ತೊಳೆಯಲು ಹೋಗುತ್ತಾಳೆ.

ಅಷ್ಟರಲ್ಲಿ ಪಾತ್ರೆಯಲ್ಲಿರುವ ನೀರು ಕುದಿಯಲಾರಂಭಿಸುತ್ತದೆ. ಕುಂದಾ ಅದಕ್ಕೆ ಚಹಾ ಪುಡಿ ಸೇರಿಸುತ್ತಾಳೆ. ಹಾಲು ಇನ್ನೂ ಮೇಲೆ ಬಂದಿಲ್ಲ. ಆದರೆ ಚಹದ ಕಡೆಗೆ ಗಮನ ಹರಿಸಿದರೆ ಹಾಲು ಉಕ್ಕಿ ಬರಬಹುದು. ಚಹಾದ ಗುಟುಕು ಹೊಟ್ಟೆಗೆ ಸೇರದೆ ಕುಂದಾಳ ಮುಂದಿನ ಕಾರ್ಯಕ್ರಮ ನೆಟ್ಟಗೆ ನಡೆಯಲಾರದು. ಹೀಗಾಗಿ ಕುಂದಾಗೆ ಚಹಾ ಬೇಕೇಬೇಕು.

ಸ್ನಾನ ಮಾಡಿ ಅವಳು ಆಫೀಸಿಗೆ ಕೊಂಡೊಯ್ಯುವ ಡಬ್ಬಿಯ ತಯಾರಿ ನಡೆಸುತ್ತಾಳೆ. ಡಬ್ಬಿಯಲ್ಲಿ ಏನು ತೆಗೆದುಕೊಂಡು ಹೋಗಬೇಕೆನ್ನುವುದನ್ನು ಅವಳು ಮೊದಲೇ ನಿರ್ಧರಿಸಿ ಇರುತ್ತಾಳೆ.

ಸೋಮವಾರ ಚಪಾತಿ–ಭಾಜಿ, ಮಂಗಳವಾರ ಅನ್ನ–ಬೇಳೆಸಾರು, ಬುಧವಾರ ಅವಳ ಅಚ್ಚುಮೆಚ್ಚಿನ ಖಾದ್ಯ ತಯಾರಿಕೆಯ ದಿನ. ಮಂಗಳವಾರ ಆಫೀಸಿನಿಂದ ಬರುವಾಗ ಅವಳು ಮಾರ್ಕೆಟಿನಿಂದ ಮೀನು ಖರೀದಿಸಿ ತರುತ್ತಾಳೆ. ಅದನ್ನು ತೊಳೆದು, ಕತ್ತರಿಸಿ ಫ್ರಿಡ್ಜ್‌ನಲ್ಲಿ ಇಡುತ್ತಾಳೆ. ಬುಧವಾರ ಬೆಳಗ್ಗೆ ಅದರಿಂದ ಘಮಘಮಿಸುವ ಹುಮಣ ಮಾಡುತ್ತಾಳೆ. ಒಂದು ತುಂಡು ಮೀನನ್ನು ಎಣ್ಣೆಯಲ್ಲಿ ಕರಿಯುತ್ತಾಳೆ. ಆ ದಿನ ಅವಳ ಡಬ್ಬಿಯಲ್ಲಿ ಅನ್ನ ಮತ್ತು ಪಲ್ಯ. ಗುರುವಾರ, ಶುಕ್ರವಾರ ಮತ್ತೆ ಚಪಾತಿಭಾಜಿ, ಶನಿವಾರ, ಭಾನುವಾರ ರಜೆ ಇರುವುದರಿಂದ ಡಬ್ಬಿಯ ಪ್ರಶ್ನೆ ಬರುವುದಿಲ್ಲ.

ಡಬ್ಬಿ ಸಿದ್ಧವಾದ ಬಳಿಕ ಅವಳು ಬ್ರೇಕ್‌ಫಾಸ್ಟ್‌ಗೆ ಕುಳಿತುಕೊಳ್ಳುತ್ತಾಳೆ.

ಅವಳ ಬೆಳಗಿನ ತಿಂಡಿಯೆಂದರೆ 'ಬ್ರೆಡ್ ಮತ್ತು ಬೆಣ್ಣೆ'. ಬೇರೆ ಏನಾದರೂ ತಯಾರಿಸಲು ಅವಳಿಗೆ ಸಮಯ ಸಿಗುವುದಿಲ್ಲ. ಅಲ್ಲದೆ ಒಂದು ಜೀವಕ್ಕೆ ಎಂತಹ ಸಂಭ್ರಮ ಬೇಕು? ಹೀಗಾಗಿ ಅವಳ ಬ್ರೇಕ್‌ಫಾಸ್ಟ್ ಯಾವಾಗಲೂ ಬ್ರೆಡ್‌ಬೆಣ್ಣೆಯೇ ಇರುತ್ತದೆ.

ಆ ಸಮಯಕ್ಕೆ ಸರಿಯಾಗಿ ಅಡುಗೆ ಕೋಣೆಯ ಕಿಟಕಿಯ ಹೊರಗೆ ಕಾಗೆಯೊಂದು ಬಂದು 'ಕಾ ಕಾ' ಮಾಡುತ್ತದೆ.

'ಬಂದೆಯಾ ಬಾಬಾ ನೀನು?' ಹೀಗೆ ಹೇಳಿ ಕುಂದಾ ಎದ್ದು ಬರುವಳು. ಒಂದು ತುಂಡು ಬ್ರೆಡ್ಡಿಗೆ ಬೆಣ್ಣೆ ಸವರಿ, ಅದನ್ನು ನಾಲ್ಕು ಭಾಗವಾಗಿ ಕತ್ತರಿಸಿ ಕಿಟಕಿಯ ಹೊರಗೆ ಇಡುವಳು.

ಕಾಗೆ ಬ್ರೆಡ್ಡಿನ ಒಂದು ಭಾಗ ತಿನ್ನುತ್ತದೆ. ಉಳಿದ ಮೂರು ಭಾಗಗಳನ್ನು ಕಷ್ಟಪಟ್ಟು ಕೊಕ್ಕಿನಲ್ಲಿ ಹಿಡಿದು ಹಾರಿ ಹೋಗುತ್ತದೆ. ಆಮೇಲೆ ಅದು ಮರುದಿನ ಬ್ರೇಕ್‌ಫಾಸ್ಟ್‌ಗೆ ಹಾಜರಾಗುತ್ತದೆ.

ಹೀಗೆ ಆ ಕಾಗೆ ಪ್ರತಿದಿನ ತಪ್ಪದೆ ಬರುವುದರಿಂದ ಕುಂದಾಗೆ ಅದು ಮನೆಯ ಹೊರಗಿನದಾಗಿಯೂ ಮನೆಯದೇ ಆಗಿಬಿಟ್ಟಿದೆ. ಅದಕ್ಕೆ ಬರಲು ತಡವಾದರೆ ಕುಂದಾಗೆ ಚಿಂತೆ ಹತ್ತಿಬಿಡುತ್ತದೆ. ಆದರೆ ಕಾಗೆಯ 'ಸಮಯ' ಎಂದೂ ತಪ್ಪುವುದಿಲ್ಲ. ಗಡಿಯಾರ ನೋಡಿ ಬಂದ ಹಾಗೆ ಅದು ತಪ್ಪದೆ ಹಾಜರಾಗುತ್ತದೆ.